ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಹೊಸ ತಾಲ್ಲೂಕುಗಳಿಗೆ ಸೌಲಭ್ಯ ನೀಡುವ ಬಗ್ಗೆ

ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

42 (233) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳು ರಚನೆಯಾಗಿ ಅಧಿಕೃತವಾಗಿ ಉದ್ಘಾಟನೆಗೊಂಡಿದ್ದರು ತಾಲ್ಲೂಕು ಕಛೇರಿಗಳು ಕಾರ್ಯಾರಂಭವಾಗಿಲ್ಲ ಮತ್ತು ತಾಲ್ಲೂಕು ಪಂಚಾಯಿತಿಗಳ ಪುನರ್ ನಿರ್ಮಾಣವಾಗಿಲ್ಲದಿರಲು ಕಾರಣಗಳೇನು; (ವಿವರ ನೀಡುವುದು)

(ಆ) ಹೊಸ ತಾಲ್ಲೂಕಿಗೆ ಇರಬೇಕಾದ ಎಲ್ಲಾ ಇಲಾಖೆಗಳ ಕಛೇರಿಗಳನ್ನು ಅನುಷ್ಠಾನ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ಈ ಹೊಸ ತಾಲ್ಲೂಕಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ; ಈ ಅವಶ್ಯಕ ಮೂಲ ಸೌಕರ್ಯಗಳನ್ನು ಯಾವಾಗ ಒದಗಿಸಲಾಗುವುದು; ಇದಕ್ಕೆ ಕಾಲಮಿತಿ ಏನು ; (ವಿವರ ನೀಡುವುದು)

(ಈ) ಕೊಡಗು ಜಿಲ್ಲೆಗೆ ಹೊಸ ತಾಲ್ಲೂಕುಗಳ ಘೋಷಣೆಯಾಗಿದ್ದು, ಇವುಗಳು ಯಾವಾಗ ಕಾರ್ಯಾರಂಭ ಮಾಡುತ್ತವೆ ; ಇವುಗಳ ಕಾರ್ಯಾರಂಭಕ್ಕೆ ಕಾಲಮಿತಿ ಏನು ; ಈ ಹೊಸ ತಾಲ್ಲೂಕುಗಳಿಗೆ ಒದಗಿಸಿರುವ ಅನುದಾನ ಎಷ್ಟು ? (ವಿವರ ನೀಡುವುದು)